# ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ:08:ವೇ.ಬಿ:ಆಯವ್ಯಯ:2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:16-08-2016

## ಅನುದಾನ ಬಿಡುಗಡೆ ಆದೇಶ

ವಿಷಯ: 2016-17 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "2202-03-103-2-01 ಇತರೇ ಸರ್ಕಾರಿ ಕಾಲೇಜುಗಳು"ಯೋಜನೆಯಡಿಯಲ್ಲಿ ವೇತನಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ:37:ಹೆಚ್‌ಪಿಸಿ:2016,ಬೆಂ, ದಿ:01-08-2016.
2. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಲಕಲ್ಲ ಇವರ ಪತ್ರ ಸಂಖ್ಯೆ:ಸ.ಪ್ರ.ದ.ಕಾ.ಇ/2016-17(ಇ-ಮೇಲ್ ಪತ್ರ)ಮತ್ತು ಸಪ್ರದಕಾಇ/ 2016-17/82 ದಿನಾಂಕ;02.07.2016(2235/12.07.2016)
3. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ ಇವರ ಪತ್ರ ಸಂಖ್ಯೆ:ಸಪ್ರದಕಾಹಾ/ಆಯವ್ಯಯ/100/20161-7 ದಿನಾಂಕ:12/06/2016.

* * * *

**ಪ್ರಸ್ತಾವನೆ:**

2016-17ನೇ ಆರ್ಥಿಕ ಸಾಲಿನ ಯೋಜನೆಯಡಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಲಕಲ್ಲ, ಇಲ್ಲಿನ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಜುಲೈ-2016ರ ವೇತನಕ್ಕಾಗಿ ರೂ.2,72,173/-ಗಳು ಮತ್ತು ಶ್ರೀ.ಎನ್.ಎನ್.ಸಂಗಳದ, ಪರಿಚಾರಕರು, ಇವರ ಅಮಾನತ್ತಿನ ಅವಧಿಯ ವೇತನ ಬಾಕಿಗಾಗಿ ಅಂದಾಜು ಮೊತ್ತ ರೂ.3,80,000/-ಗಳು, ಸ.ಪ್ರ.ದ.ಕಾ ರಬಕವಿ ಬನಹಟ್ಟಿ ಕಾಲೇಜಿನ ಸಿಬ್ಬಂದಿಗಳಿಗೆ ಮೇ-2016, ಜೂನ್-2016 ಮತ್ತು ಜುಲೈ-2016ರ ವೇತನ ಪಾವತಿಗಾಗಿ ಕ್ರಮವಾಗಿ ರೂ.4,83,354/-, ರೂ.55,33,54/- ಹಾಗೂ ರೂ.55,33,54/-ಗಳು ಹಾಗೂ ಸಪ್ರದಕಾ ಹಾವೇರಿ ಕಾಲೇಜಿನ ಸಿಬ್ಬಂದಿಗಳಿಗೆ ಜುಲೈ-2016ರ ಮಾಹೆಯ ವೇತನ ಬಾಕಿಗಾಗಿ ರೂ. 1558403/-ಗಳ ಅನುದಾನವನ್ನು ಸದರಿ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕರಿಸಿರುವ ಅನುದಾನ ಕೋರಿಕೆ ಪ್ರಸ್ತಾವನೆಗಳನ್ನು ಆಧರಿಸಿ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ ಸಂಖ್ಯೆ: ಕಾಶಿಇ:08:ವೇ.ಬಿ:ಆಯವ್ಯಯ:2016-17, ಬೆಂಗಳೂರು, ದಿನಾಂಕ:16/08/2016.

ಪ್ರಸ್ತಾವನೆಗಳಲ್ಲಿ ವಿವರಿಸಿರುವಂತೆ, ಈ ಇಲಾಖಾ ವ್ಯಾಪ್ತಿಯಲ್ಲಿ ಬರುವ 03 ಯೋಜನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿತ ಕಾಲೇಜುಗಳ ಪ್ರಾಂಶುಪಾಲರು ಸಲ್ಲಿಸಿರುವ ಕೋರಿಕೆಯನ್ವಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಲಕಲ್ಲ, ಕಾಲೇಜಿನ ಸಿಬ್ಬಂದಿಗಳಿಗೆ ಜುಲೈ-2016ರ ವೇತನ ಮತ್ತು ಶ್ರೀ.ಎನ್.ಎನ್.ಸಂಗಳದ, ಪರಿಚಾರಕರು, ಇವರ ಅಮಾನತ್ತಿನ ಅವಧಿಯ ವೇತನ ಬಾಕಿ ಪಾವತಿಗಾಗಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಬಕವಿ ಬನಹಟ್ಟಿ ಕಾಲೇಜಿನ ಸಿಬ್ಬಂದಿಗಳಿಗೆ ಮೇ-2016, ಜೂನ್-2016 ಹಾಗೂ ಜುಲೈ-2016 ರ ವೇತನ ಪಾವತಿಗಾಗಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ, ಕಾಲೇಜಿನ ಸಿಬ್ಬಂದಿಗಳಿಗೆ ಜುಲೈ-2016ರ ಮಾಹೆಯ ವೇತನ ಬಾಕಿ, ತುಟ್ಟಿಭತ್ಯೆ ಬಾಕಿ ಹಾಗೂ ಗಳಿಕೆ ರಜೆ ನಗದೀಕರಣ ಪಾವತಿಗಾಗಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

. . . 2

| ಕ್ರ ಸಂ | ಕಾಲೇಜಿನ ಹೆಸರು | ಬಿಡುಗಡೆ ಮಾಡಲಾದ ಅನುದಾನ | ಷರಾ |
|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಲಕಲ್ಲ | ರೂ.6,42,173/- | ಸದರಿ ಕಾಲೇಜಿನ ಸಿಬ್ಬಂದಿಗಳಿಗೆ ಜುಲೈ-2016ರ ವೇತನ ಹಾಗೂ ಶ್ರೀ.ಎನ್.ಎನ್.ಸಂಗಳದ, ಪರಿಚಾರಕರು, ಇವರ ಅಮಾನತ್ತಿನ ಅವಧಿಯ ವೇತನ ಬಾಕಿ ಪಾವತಿಸಲು ಮಾತ್ರ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಬಕವಿ ಬನಹಟ್ಟಿ | ರೂ.14,91,562/- | ಸದರಿ ಕಾಲೇಜಿನ ಸಿಬ್ಬಂದಿಗಳಿಗೆ ಮೇ-2016, ಜೂನ್-2016 ಮತ್ತು ಜುಲೈ-2016ರ ವೇತನ, ತುಟ್ಟಿಭತ್ಯೆ ಬಾಕಿ ಹಾಗೂ ಗಳಿಕೆ ರಜೆ ನಗದೀಕರಣ ಬಾಕಿ ಪಾವತಿಸಲು ಮಾತ್ರ |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ | ರೂ.15,58,403/- | ಸದರಿ ಕಾಲೇಜಿನ ಸಿಬ್ಬಂದಿಗಳಿಗೆ ಜುಲೈ-2016ರ ವೇತನ ಬಾಕಿ ಪಾವತಿಸಲು ಮಾತ್ರ |

ಸೂಚನೆಗಳು:

1. ಪ್ರಾಂಶುಪಾಲರ ಕೋರಿಕೆಯನ್ನು ಅನುಸರಿಸಿ ಈ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
2. ಈಗ ಬಿಡುಗಡೆಯಾಗಿರುವ ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಗಳಿಗೆ ಬಳಕೆ ಮಾಡಿಕೊಂಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಬಳಕೆ ಪ್ರಮಾಣ ಪತ್ರ ಸಲ್ಲಿಸದ ಕಾಲೇಜುಗಳಿಗೆ ಮುಂದಿನ ಮಾಹೆಗಳ ವೇತನ ಬಿಡುಗಡೆ ಮಾಡಲಾಗುವುದಿಲ್ಲ.
3. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವೇತನಕ್ಕಾಗಿ ಕೇಂದ್ರ ಕಛೇರಿಯಿಂದ ಬಿಡುಗಡೆಯಾದ ಅನುದಾನವನ್ನು ಆಯಾ ಬಾಬ್ತುಗಳಿಗೆ ಮಾತ್ರ ಪಾವತಿಸತಕ್ಕದ್ದು, ಅಲ್ಲದೇ ಬೇರೆ ಬಾಬ್ತುಗಳಿಗೆ ಪಾವತಿಸಿದ್ದಲ್ಲಿ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.
4. ಈ ಹಿಂದೆ ವೇತನಕ್ಕಾಗಿ ಬಿಡುಗಡೆಯಾದ ಅನುದಾನದ ಆದೇಶದ ನಡವಳಿಗಳಲ್ಲಿ ತಿಳಿಸಿರುವ ಎಲ್ಲಾ ಸೂಚನೆಗಳನ್ನು ಪರಿಗಣಿಸಿ ವೇತನವನ್ನು ವಿತರಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
5. ಮಹಾಲೇಖಪಾಲರು, ಲೆಕ್ಕ ತಪಾಸಣಾ ಸಮಯದಲ್ಲಿ ಪ್ರತಿ ವರ್ಷ ಬಿಡುಗಡೆಯಾದ ಅನುದಾನವನ್ನು ಖರ್ಚು ಮಾಡಲಾದ ಬಗ್ಗೆ ಧೃಢೀಕರಣವನ್ನು ನೀಡಬೇಕೆಂದು ತಿಳಿಸಿರುವುದರಿಂದ ಕಡ್ಡಾಯವಾಗಿ ಲೆಕ್ಕ ತಪಾಸಣಾ ಸಮಯದಲ್ಲಿ ಮಾಹಿತಿಗಳನ್ನು ಒದಗಿಸಲು ಸೂಚಿಸಲಾಗಿದೆ. ಆದುದರಿಂದ ಪ್ರತಿ ತಿಂಗಳವಾರು ಕೇಂದ್ರ ಕಛೇರಿಯಿಂದ ವೇತನಕ್ಕೆ ಬಿಡುಗಡೆಯಾದ ಅನುದಾನ ಬಳಕೆಯಾದ ಬಗ್ಗೆ ಜಿಲ್ಲಾ ಖಜಾನೆಯಿಂದ ಪಡೆದ 62 ಬಿ ಯೊಂದಿಗೆ ತಾಳೆ ಮಾಡಿ ಧೃಢೀಕರಣದೊಂದಿಗೆ ವೆಚ್ಚ ವಿವರಣಾ ಪಟ್ಟಿಯನ್ನು ಪ್ರತಿ ತಿಂಗಳ ಹತ್ತರೊಳಗಾಗಿ ತಪ್ಪದೇ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
6. ಸದರಿ ಅನುದಾನವನ್ನು ನಿಯಮಾನುಸಾರ ಭರಿಸಲು ಸೂಚಿಸಿದೆ.
7. ಈ ಅನುದಾನ ಬಿಡುಗಡೆ ವಿಷಯದಲ್ಲಿ ಯಾವುದಾದರೂ ತಪ್ಪಾಗಿ ಪಾವತಿಯಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು/ಅಧಿಕಾರಿ ಸಿಬ್ಬಂದಿಗಳು ಜವಾಬ್ದಾರರಾಗುವರು.
8. ಪ್ರಸ್ತುತ ಬಿಡುಗಡೆ ಮಾಡಿರುವ ಅನುದಾನವನ್ನು ಖಜಾನೆಗೆ ಸಲ್ಲಿಸಲು ಇರುವ ನಿಗದಿತ ದಿನಾಂಕದೊಳಗೆ ಬಿಲ್ಲುಗಳನ್ನು ಸಲ್ಲಿಸಲು ಅನುದಾನವನ್ನು ವ್ಯಪಗತವಾಗದಂತೆ ಬಳಸಿಕೊಳ್ಳಲು ಸೂಚಿಸಿದೆ.

ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

ಪ್ರತಿಯನ್ನು:

1) ಸಂಬಂಧಪಟ್ಟ ಯೋಜನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ಶ್ರೀ ರಮೇಶರೆಡ್ಡಿ, ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಅಂತರ್ಜಾಲದಲ್ಲಿ ಅತೀ ಜರೂರಾಗಿ ಇಂದೇ ಅಳವಡಿಸಲು ಕೋರಿದೆ.
3) ಕಛೇರಿ ಪ್ರತಿ.